# KARNATAKA LOKAYUKTA

No: UPLOK-2/DE/83/2021/ARE-17

M.S.Building,
Dr. B.R. Ambedkar Veedhi,
Bengaluru - 560 001
Dated: 31/03/2023

## ENQUIRY REPORT

**Present** : Rajakumar S. Amminabhavi
Addl. Registrar of Enquiries-17,
Karnataka Lokayukta,
Bengaluru.

**Sub:**-Departmental Inquiry against Sri H.R. Kishore, Village Accountant, Malavalli Taluk, Mandya District - reg.

**Ref:**-1.Government Order No. ಕಂಇ 218 ಬಿಎಂಎಂ 2018 Bengaluru, dated 04/05/2021.
2.Nomination Order No. Uplok-2/DE/83/2021 Bengaluru dated 08/07/2021 of Hon'ble Upalokayukta.

******

A suo-motu investigation was took up under Section 7 read with section 9 of The Karnataka Lokayukta Act, 1984, against Sri H.R. Kishore, Village Accountant, Malavalli Taluk, Mandya District (hereinafter referred to as 'DGO') on the basis of the report was sent to the Government u/s 12(3) of the Karnataka Lokayukta Act, 1984 in No.Compt/Uplok/MYS/956/2016/ARE-20 against the DGO. Pursuant to the report, Government was pleased to issue the Government Order as per reference No.1. authorizing Hon'ble Upa-lokayukta to hold an enquiry

against the DGO-**Sri H.R. Kishore,** Village Accountant, Malavalli Taluk, Mandya District.

2. On the basis of the Government Order, nomination order was issued by Hon'ble Upalokayukta-2 on 08/07/2021 authorizing ARE-17 to frame Article of Charges against the DGO, and to hold an enquiry and to submit a report as per reference No.2. On the basis of the nomination order, the Article of Charges against **DGO** was framed and sent to the Delinquent Government Official on 15/09/2021.

3. The Article of charges and the statement of imputations of misconduct prepared and leveled against the DGO is reproduced here as under;

**ಅನುಬಂಧ-1**
**ದೋಷಾರೋಪಣೆ ಪಟ್ಟಿ**

1. ದೂರುದಾರರಾದ ಶ್ರೀಮತಿ.ಆರ್.ಕೋಮಲ ಡಾ/ಆಫ್ ಲೇಟ್ ರಾಚಪ್ಪ, ನಂ.10, 3ನೇ ಕ್ರಾಸ್, ಅಯ್ಯಪ್ಪಸ್ವಾಮಿ ದೇವಸ್ಥಾನದ ರಸ್ತೆ, ಸುಬ್ಬಣ್ಣ ಗಾರ್ಡನ್, ವಿಜಯನಗರ, ಬೆಂಗಳೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಆ,ಸ,ನೌ.ರಾದ ಶ್ರೀ.ಹೆಚ್.ಆರ್.ಕಿಶೋರ್, ಗ್ರಾಮ ಲೆಕ್ಕಾಧಿಕಾರಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ನೀವು ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಹೋಬಳಿಯ ಬೆಳಕವಾಡಿ ಗ್ರಾಮದ ಸ.ನಂ.9 ರಲ್ಲಿ 0.23 ಗುಂಟೆ, ಸ.ನಂ.11/ಎ ರಲ್ಲಿ 0.09.08 ಗುಂಟೆ ಜಮೀನನ್ನು ದೂರುದಾರರಾದ ಶ್ರೀಮತಿ.ಆರ್.ಕೋಮಲ ಇವರ ಸಹೋದರ ಶ್ರೀ.ಆರ್.ಬಸವರಾಜ್ ರವರು ಒಬ್ಬನೇ ಮಗನೆಂದು ನಕಲಿ ದಾಖಲೆಗಳನ್ನು ಸಲ್ಲಿಸಿ, ಖಾತೆ ವರ್ಗಾವಣೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಕುರಿತಂತೆ ಆ.ಸ.ನೌ.ರಾದ ನೀವು ಸರಿಯಾಗಿ ಪರಿಶೀಲಿಸದೆ ಅರ್ಜಿಯೊಂದಿಗೆ ಸಲ್ಲಿಕೆಯಾದ ದಾಖಲೆಗಳ ನೈಜತೆಯನ್ನು ಪರಿಶೀಲಿಸಿಕೊಳ್ಳದೆ ಖಾತಾ ಬದಲಾವಣೆ ಮಾಡಬಹುದೆಂದು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವ ಮೂಲಕ ಖಾತೆ ಬದಲಾವಣೆ ಮಾಡಲು ಕಾರಣರಾಗಿರುತ್ತೀರಿ.

ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ

(ನಡತೆ) ನಿಯಮಾವಳಿ 1966ರ ನಿಯಮ 3(1)(i)(ii)&(iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

(ರಾಜಕುಮಾರ ಎಸ್. ಅಮ್ಮಿನಭಾವಿ)
ಅಪರ ನಿಬಂಧಕರು ವಿಚಾರಣೆಗಳು-17,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ಅನುಬಂಧ-2**
**ದೋಷಾರೋಪಣೆಯ ವಿವರ**

2. ದೂರುದಾರರಾದ ಶ್ರೀಮತಿ.ಆರ್.ಕೋಮಲ ಡಾ/ಆಫ್ ಲೇಟ್ ರಾಚಪ್ಪ, ನಂ.10, 3ನೇ ಕ್ರಾಸ್, ಅಯ್ಯಪ್ಪಸ್ವಾಮಿ ದೇವಸ್ಥಾನದ ರಸ್ತೆ, ಸುಬ್ಬಣ್ಣ ಗಾರ್ಡನ್, ವಿಜಯನಗರ, ಬೆಂಗಳೂರು ರವರು ಈ ದೂರನ್ನು ತಹಶೀಲ್ದಾರ್, ತಾಲ್ಲೂಕು ಕಚೇರಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ರವರ ವಿರುದ್ಧ ದಾಖಲಿಸಿ ದೂರುದಾರರ ತಂದೆ ರಾಚಯ್ಯ ಹಾಗೂ ತಾಯಿ ನಿಂಗಮ್ಮ ರವರಿಗೆ ಒಟ್ಟು 6 ಜನ ಮಕ್ಕಳಿರುತ್ತಾರೆಂದು, ಅದರಲ್ಲಿ ದೂರುದಾರರು ಸಹಾ ಒಬ್ಬರಾಗಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಹೋಬಳಿಯ ಬೆಳಕವಾಡಿ ಗ್ರಾಮದ ಸರ್ವೆ ನಂ.57/2 ರಲ್ಲಿ 1.13 ಗುಂಟೆ, ಸರ್ವೆ ನಂ.72/1ಬಿ ರಲ್ಲಿ 0.06 ಗುಂಟೆ, ಸರ್ವೆ ನಂ.9 ರಲ್ಲಿ 0.23 ಗುಂಟೆ, ಸರ್ವೆ ನಂ.11//ಎ ರಲ್ಲಿ 0.09.08 ಗುಂಟೆ ದೂರುದಾರರ ತಂದೆ ತಾಯಿಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆಂದು, ಸದರಿ ಜಮೀನನ್ನು ದೂರುದಾರರ ಸಹೋದರನಾದ ಶ್ರೀ.ಆರ್.ಬಸವರಾಜು ರವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ತಾನು ಒಬ್ಬನೇ ಮಗನೆಂದು ಬಿಂಬಿಸಿ, ಎದುರುದಾರರಿಗೆ ಅವರ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಡಬೇಕಾಗಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಆದರೆ, ಎದುರುದಾರರು ಶ್ರೀ.ಆರ್.ಬಸವರಾಜು-ದೂರುದಾರರ ಸಹೋದರ ರವರೊಂದಿಗೆ ಶಾಮೀಲಾಗಿ, ಸದರಿ ಮೇಲ್ಕಂಡ ಜಮೀನನ್ನು ಶ್ರೀ.ಆರ್.ಬಸವರಾಜು-ದೂರುದಾರರ ಸಹೋದರ, ಅವರ ಪತ್ನಿ ಪಿ.ನಾಗರತ್ನಮ್ಮ, ಅವರ ಮಗ ಆರ್.ಚಂದನ್ ಕುಮಾರ್ ರವರುಗಳ ಹೆಸರಿಗೆ ಕಾನೂನು ಬಾಹಿರವಾಗಿ ಖಾತಾ ವರ್ಗಾವಣೆ ಮಾಡಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

3. ದೂರುದಾರರು ಸಲ್ಲಿಸಿದ ದೂರಿಗೆ ಎದುರುದಾರರಾದ ತಹಶೀಲ್ದಾರ್, ಮಳವಳ್ಳಿ ತಾಲ್ಲೂಕು ಇವರು ದಿ.31/05/2016 ರಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ, ಮಳವಳ್ಳಿ ತಾಲ್ಲೂಕು, ಬಿ.ಜಿ.ಪುರ ಹೋಬಳಿಯ ಬೆಳಕವಾಡಿ ಗ್ರಾಮದ ಸರ್ವೆ ನಂ.57/2 ರಲ್ಲಿ 1.13 ಗುಂಟೆ, ಸರ್ವೆ ನಂ.72/1ಬಿ ರಲ್ಲಿ 0.06 ಗುಂಟೆ, ಸರ್ವೆ ನಂ.9 ರಲ್ಲಿ 0.23 ಗುಂಟೆ, ಸರ್ವೆ ನಂ.11/ಎ ರಲ್ಲಿ 0.09.08 ಗುಂಟೆ ಜಮೀನು ನಿಂಗಮ್ಮ ಕೋಂ ರಾಚಯ್ಯ ರವರ ಹೆಸರಿನಲ್ಲಿದ್ದು, ಲೇಟ್ ರಾಚಯ್ಯ ರವರ ಮಗನಾದ ಶ್ರೀ.ಆರ್.ಬಸವರಾಜು ರವರು, ಅವರ ಹೆಸರಿಗೆ ಖಾತಾ ಬದಲಾವಣೆ ಕೋರಿ ದಿನಾಂಕ

24/4/2010 ರಂದು ನಮೂನೆ 20, ವಂಶವೃಕ್ಷ, ಚಾಲ್ತಿ ಆರ್.ಟಿ.ಸಿ, ಖಾತೆ ಒಪ್ಪಿಗೆ ಪತ್ರದೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ. ಖಾತೆ ಕೋರಿ ಸಲ್ಲಿಸಿರುವ ವಂಶವೃಕ್ಷದಲ್ಲಿ ದೂರುದಾರರ ಮತ್ತು ಇತರೆಯವರ ಹೆಸರು ಇರುವುದಿಲ್ಲ. ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 89 ರಂತೆ ಸಂಬಂಧಪಟ್ಟವರಿಂದ ಆಕ್ಷೇಪಣೆ ಬಗ್ಗೆ ಆಹ್ವಾನಿಸಲಾಗಿದೆ. ಈ ಖಾತೆಗೆ ನಮೂನೆ 12 ಮತ್ತು 21 ನ್ನು ಪ್ರಕಟಿಸಿದ್ದು ಖಾತೆದಾರರಾದ ನಿಂಗಮ್ಮ ಹಾಗೂ ಅರ್ಜಿದಾರರಾದ ಆರ್.ಬಸವರಾಜು ರವರು ನಮೂನೆ 20 ರಲ್ಲಿ ಒಪ್ಪಿಗೆ ಸಹಿ ಮಾಡಿದ್ದು (ಹಕ್ಕು ಬದಲಾವಣೆ ರಿಪೋರ್ಟ್‌ಗೆ) ಒಪ್ಪಿರುತ್ತಾರೆ. ಇದೇ ನಮೂನೆಗೆ ಮಗನಾದ ಆರ್.ಬಸವರಾಜು ಸಹಿ ಮಾಡಿರುತ್ತಾರೆ. 2009-10ನೇ ಸಾಲಿನ ಸರ್ವೆ ನಂ.9 ರಲ್ಲಿ 0.23 ಗುಂಟೆ, ಸರ್ವೆ ನಂ.72/ಬಿ ರಲ್ಲಿ 0.06 ಗುಂಟೆ, ಸರ್ವೆ ನಂ.11/ಎ ರಲ್ಲಿ 0.09.08 ಗುಂಟೆ, ಸರ್ವೆ ನಂ.57/2 ರಲ್ಲಿ 1.13 ಗುಂಟೆ ಜಮೀನಿನ ಆರ್.ಟಿ.ಸಿ.ಗಳನ್ನು ಲಗತ್ತಿಸಿರುತ್ತಾರೆ. ಇದರ ಜೊತೆಗೆ ಖಾತಾ ಒಪ್ಪಿಗೆ ಪತ್ರವನ್ನು ಸಹ ನಿಂಗಮ್ಮ ರವರು ಸಲ್ಲಿಸಿರುತ್ತಾರೆ. ಆರ್.ಬಸವರಾಜ್ ರವರು ದಿನಾಂಕ 28/5/2010 ರಂದು ಮಾಡಲಾಗಿರುವ ವಂಶವೃಕ್ಷದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಪ್ರಮಾಣ ಪತ್ರದಲ್ಲಿ ಪಿ.ರಾಚಪ್ಪ ಪೌತಿ ಇವರ ಹೆಂಡತಿ ನಿಂಗಮ್ಮ, ಆರ್.ಬಸವರಾಜು ಇವರ ಹೆಂಡತಿ ಪಿ.ನಾಗರತ್ನಮ್ಮ, ಇವರ ಮಗ ಆರ್.ಚಂದನ್ ಕುಮಾರ್ ಎಂದು ನಮೂದಿಸಿ ಮೇಲೆ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ ಎಂದು ಹೆಚ್.ವಿ.ನಾಗರಾಜು ವಕೀಲರು ಮತ್ತು ನೋಟರಿ ಮಳವಳ್ಳಿ ಇವರ ಮುಂದೆ ಪ್ರಮಾಣೀಕರಿಸಿರುತ್ತಾರೆ. ಆ ಅವಧಿಯಲ್ಲಿ ದೂರುದಾರರು ಅಥವಾ ಇವರು ಹೆಸರಿಸಿರುವವರು ಯಾರು ಸಹ ಭೂ ಕಂದಾಯ ನಿಯಮದಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದರೂ ಸಹಾ, ಖಾತಾ ಬದಲಾವಣೆಗೆ ನಿಗದಿಪಡಿಸಿದ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಯಾವುದೇ ಆಕ್ಷೇಪಣೆ ಸಲ್ಲಿಕೆಯಾಗದ ಕಾರಣ ಖಾತೆದಾರರು ಜೀವಂತವಿದ್ದು ಅವರ ಒಪ್ಪಿಗೆ ಮೇರೆಗೆ ನಮೂನೆ 20 ರಲ್ಲಿ ಅರ್ಜಿ ಸಲ್ಲಿಸಿರುವುದರಿಂದ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲವೆಂದು ಪರಿಗಣಿಸಿ ಆರ್.ಬಸವರಾಜು ರವರಿಗೆ ಎಂ.ಆರ್.ನಂ.225/2009-10 ರಂತೆ ಖಾತೆ ಅಂಗೀಕಾರವಾಗಿರುತ್ತದೆಂದು ತಿಳಿಸಿರುತ್ತಾರೆ.

4. ಮತ್ತೆ ಮುಂದುವರೆದು, ದೂರುದಾರರು ದಿನಾಂಕ 23/5/2015 ರಂದು ಅರ್ಜಿ ಸಲ್ಲಿಸಿ ಖಾತೆಯನ್ನು ಪ್ರಶ್ನಿಸಿರುತ್ತಾರೆ. ಆದರೆ ಯಾವುದೇ ಒಂದು ವಹಿವಾಟು ತಾಲ್ಲೂಕು ಕಚೇರಿಯಲ್ಲಿ (ಎಂ.ಆರ್.ವಹಿವಾಟು) ನಡೆದ ನಂತರ ಅದನ್ನು ಪುನರ್ ವಿಮರ್ಶಿಸುವ/ತಿದ್ದುಪಡಿ ಮಾಡುವ ಅಧಿಕಾರ ತಹಶೀಲ್ದಾರ್ ರವರ ಕಚೇರಿಯ ವ್ಯಾಪ್ತಿಗೆ ಬರುವುದಿಲ್ಲ, ಈ ಹಿನ್ನೆಲೆಯಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲ ..(2) ರಂತೆ ಮೇಲ್ಮನವಿ ಸಲ್ಲಿಸಿಕೊಳ್ಳಲು ತಿಳಿಸಿ ದೂರುದಾರರಿಗೆ ದಿನಾಂಕ 12/6/2015 ರಂದು ಹಾಗೂ 26/4/2016 ರಂದು ಹಿಂಬರಹ ನೀಡಲಾಗಿದೆಯೆಂದು, ಹೀಗಿದ್ದರೂ ಸಹಾ, ದೂರುದಾರರು ಪದೇ ಪದೇ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸುವ ಮೂಲಕ ಅನಾವಶ್ಯಕವಾಗಿ ಪತ್ರ ವ್ಯವಹಾರಕ್ಕೆ ಅವಕಾಶ ಮಾಡುತ್ತಿದ್ದಾರೆಂದು ತಿಳಿಸಿರುತ್ತಾರೆ.

5. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗೆ, ದೂರುದಾರರು ದಿನಾಂಕ 25/7/2016 ರಂದು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತ್ಯುತ್ತರದಲ್ಲಿ, ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನು ದೂರುದಾರರ ತಾಯಿಯವರಾದ ನಿಂಗಮ್ಮ ಕೋಂ ರಾಚಯ್ಯ ರವರ

ಹೆಸರಿನಲ್ಲಿದ್ದು, ಸದರಿ ಜಮೀನುಗಳನ್ನು ಶ್ರೀ.ಆರ್.ಬಸವರಾಜು ರವರು ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡುವಂತೆ ಕೋರಿ ಎದುರುದಾರರಿಗೆ ದಿನಾಂಕ 27/4/2010 ರಂದು ಅರ್ಜಿ ಸಲ್ಲಿಸಿರುತ್ತಾರೆಂದು, ಈ ಸಂಬಂಧ, ಎದುರುದಾರರು ಶ್ರೀ.ಆರ್.ಬಸವರಾಜು ರವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸದೇ ಅವರ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ಎದುರುದಾರರು ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಮೇಲ್ಕಂಡ ಸರ್ವೆ ನಂಬರ್ ಜಮೀನನ್ನು ಶ್ರೀ.ಆರ್.ಬಸವರಾಜು ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡುವ ಮೊದಲು ಯಾವುದೇ ಪತ್ರಿಕಾ ಪ್ರಕಟಣೆಯ ದಾಖಲೆಗಳು ಪತ್ರಿಕಾ ಪ್ರಕಟಣೆಗಾಗಿ ಪತ್ರಿಕಾಲಯಕ್ಕೆ ಕಟ್ಟಿರುವ ಹಣ ಸಂದಾಯ ರಶೀದಿ ಕೂಡ ಲಗತ್ತಿಸಿರುವುದಿಲ್ಲವೆಂದು, ಇದು ಅಲ್ಲದೇ, ಪತ್ರಿಕಾ ಪ್ರಕಟಣೆಗಳ ಪ್ರತಿಯನ್ನು ಮಾನ್ಯ ತಹಶೀಲ್ದಾರ್ ರವರ ಕಚೇರಿಯ ಆದೇಶದೊಡನೆ ಪ್ರಕಟಣೆಗಾಗಿ ಕಚೇರಿಯ ಫಲಕದಲ್ಲಿಯೂ ಪ್ರಕಟಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

6. ಇದು ಅಲ್ಲದೇ, ದೂರುದಾರರು ಆರ್.ಬಸವರಾಜು ರವರ ಸಹೋದರಿಯಾಗಿದ್ದು, ತಹಶೀಲ್ದಾರ್ ರವರ ಕಚೇರಿಯ ಕಡತದಲ್ಲಿ ದೂರುದಾರರ ಹೆಸರಿಗೆ ವರ್ಗಾವಣೆಯಾಗಿರುವ ದಾಖಲೆಗಳು ಲಭ್ಯವಿರುವಾಗ ದೂರುದಾರರ ವಿಳಾಸಕ್ಕೆ ನೋಂದಣಿ ಅಂಚೆ ಮೂಲಕ ಒಂದು ಲಿಖಿತ ಆಕ್ಷೇಪಣೆಯನ್ನು ಕಳುಹಿಸಬಹುದಾಗಿರುತ್ತದೆಂದು, ಹಾಗೂ ದೂರುದಾರರ ಕಿರಿಯ ಸಹೋದರಿಯಾದ ಶ್ರೀಮತಿ.ನಾಗರತ್ನ ರವರ ಮದುವೆ ಸಂದರ್ಭದಲ್ಲಿ, ದೂರುದಾರರಿಂದ ರೂ.6.50 ಲಕಷಗಳನ್ನು ಸಾಲವಾಗಿ ಪಡೆದಿದ್ದು, ಈ ಹಿನ್ನೆಲೆಯಲ್ಲಿ ಸರ್ವೆ ನಂ.57/2 ಜಮೀನನ್ನು ದೂರುದಾರರಿಗೆ ವಹಿಸಿಕೊಡಲಾಗಿದೆಯೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ಎದುರುದಾರರಾದ ತಹಶೀಲ್ದಾರ್ ರವರು ಶ್ರೀ.ಆರ್.ಬಸವರಾಜು ಸಲ್ಲಿಸಿರುವ ಯಾವುದೇ ವಂಶವೃಕ್ಷ ದಾಖಲೆಗಳನ್ನು ಪರಿಶೀಲಿಸದೆ ದೂರುದಾರರ ಹೆಸರಿಗೆ ನೋಂದಾಯಿತವಾಗಿರುವ ಜಮೀನಿನ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಶ್ರೀ.ಆರ್.ಬಸವರಾಜು ರವರೊಂದಿಗೆ ಶಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಶ್ರೀ.ಆರ್.ಬಸವರಾಜು ರವರೊಂದಿಗೆ ಶಾಮೀಲಾಗಿ ಮೇಲ್ಕಂಡ ಸ್ವತ್ತಿನ ಜಮೀನಿನ ದಾಖಲೆಗಳನ್ನು ಕಾನೂನು ಬಾಹಿರವಾಗಿ ಶ್ರೀ.ಆರ್.ಬಸವರಾಜು ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ.

7. ದೂರುದಾರರು ಸಲ್ಲಿಸಿರುವ ದೂರು ಮತ್ತು ದಾಖಲಾತಿಗಳು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಮತ್ತು ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ ಕಂಡುಬರುವುದೇನೆಂದರೆ, ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಹೋಬಳಿಯ ಬೆಳಕವಾಡಿ ಗ್ರಾಮದ ಸರ್ವೆ ನಂ.57/2 ರಲ್ಲಿ 1.13 ಗುಂಟೆ, ಸರ್ವೆ ನಂ.72/1ಬಿ ರಲ್ಲಿ 0.06 ಗುಂಟೆ, ಸರ್ವೆ ನಂ.9 ರಲ್ಲಿ 0.23 ಗುಂಟೆ, ಸರ್ವೆ ನಂ.11/ಎ ರಲ್ಲಿ 0.09.08 ಗುಂಟೆ ಜಮೀನು ಶ್ರೀಮತಿ.ನಿಂಗಮ್ಮ ಕೋಂ ರಾಚಯ್ಯ ರವರ ಹೆಸರಿನಲ್ಲಿದ್ದು, ದೂರುದಾರರ ಸಹೋದರನಾದ ಶ್ರೀ.ಆರ್.ಬಸವರಾಜು ರವರು ಖಾತೆ ಬದಲಾವಣೆ ಮಾಡಿಕೊಡಬೇಕೆಂದು ಕೋರಿ ಸಲ್ಲಿಸಿರುವ ಅರ್ಜಿಯನ್ನು (ವಂಶವೃಕ್ಷ ಇತರೆ ದಾಖಲೆಗಳು) ಎದುರುದಾರರು ಪರಿಶೀಲಿಸದೇ ಕಾನೂನು ಬಾಹಿರವಾಗಿ ಶ್ರೀ.ಆರ್.ಬಸವರಾಜು ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡಿದ್ದಾರೆ ಎಂಬುದು

ದೂರುದಾರರ ಆಪಾದನೆಯಾಗಿದೆ. ಇದಕ್ಕೆ ಸಂಬಂಧಿಸಿದಂತೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಶ್ರೀ.ಆರ್.ಬಸವರಾಜು ರವರು ಖಾತಾ ಒಪ್ಪಿಗೆ ಪತ್ರ, ವಂಶವೃಕ್ಷ, ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳೊಂದಿಗೆ ಮೇಲ್ಕಂಡ ಸ್ವತ್ತನ್ನು ಖಾತಾ ವರ್ಗಾವಣೆ ಮಾಡಿಕೊಡಬೇಕಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 89 ರಂತೆ ಸಂಬಂಧಪಟ್ಟವರಿಂದ ಆಕ್ಷೇಪಣೆ ಆಹ್ವಾನಿಸಲಾಗಿದೆ, ಈ ಬಗ್ಗೆ ದೂರುದಾರರಾಗಲೀ ಅಥವಾ ಇವರು ಹೆಸರಿಸಿದವರಾಗಲೀ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸದ ಕಾರಣ ಶ್ರೀ.ಬಸವರಾಜು ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರು ಖಾತಾ ವರ್ಗಾವಣೆ ಮಾಡುವ ಮೊದಲು ಶ್ರೀ.ಆರ್.ಬಸವರಾಜು ರವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ನಂತರ ಅವರ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಡದೆ ಕಾನೂನು ಬಾಹಿರವಾಗಿ ಯಾವುದೇ ನಿಯಮಗಳನ್ನು ಪಾಲಿಸದೇ ಶ್ರೀ.ಬಸವರಾಜು ರವರೊಂದಿಗೆ ಶಾಮೀಲಾಗಿ ಎದುರುದಾರರು ಖಾತಾ ವರ್ಗಾವಣೆ ಮಾಡಿಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ.

8. ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರಾದ ತಹಶೀಲ್ದಾರ್‌ರವರು ಶ್ರೀ.ಆರ್.ಬಸವರಾಜು ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡುವ ಮೊದಲು ಶ್ರೀ.ಆರ್.ಬಸವರಾಜು ರವರು ಸಲ್ಲಿಸಿರುವ ದಾಖಲೆಗಳ ನೈಜತೆಯ ಬಗ್ಗೆ (ವಂಶವೃಕ್ಷ, ಪ್ರಮಾಣ ಪತ್ರ ವಗೈರೆ) ವ್ಯಾಪ್ತಿಯ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಂದ ಸರಿಯಾದ ವರದಿಯನ್ನು ಪಡೆದು, ನಂತರ ಶ್ರೀ.ಆರ್.ಬಸವರಾಜು ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡಬೇಕಾಗಿರುವುದು ಎದುರುದಾರರ ಆಧ್ಯ ಕರ್ತವ್ಯವಾಗಿರುತ್ತದೆ.

9. ಆದ್ದರಿಂದ, (1) ಗ್ರಾಮ ಲೆಕ್ಕಾಧಿಕಾರಿಗಳು (2) ರಾಜಸ್ವ ನಿರೀಕ್ಷಕರು, ಮತ್ತು (3) ಸಂಬಂಧಪಟ್ಟ ತಹಶೀಲ್ದಾರ್, ಮಳವಳ್ಳಿ ರವರುಗಳು ದೂರಿನಲ್ಲಿ ಎದುರುದಾರರಾಗಿರುವುದಿಲ್ಲ. ಆದ್ದರಿಂದ, ಸದರಿಯವರನ್ನು 2 ರಿಂದ 4ನೇ ಎದುರುದಾರರನ್ನಾಗಿ implead ಮಾಡಲು ಹಾಗೂ ಸದರಿಯವರಿಂದ ಆಕ್ಷೇಪಣೆಗಳನ್ನು ತರಿಸುವಂತೆ ಗೌರವಾನ್ವಿತರು ದಿನಾಂಕ 8/8/2016 ರಂದು ಕಂಡಿಕೆ 37 ರಲ್ಲಿ ಆದೇಶಿಸಿರುತ್ತಾರೆ.

10. ಈ ಸಂಬಂಧ ಗೌರವಾನ್ವಿತ ಉಪಲೋಕಾಯುಕ್ತರ ಆದೇಶದನ್ವಯ ಮೇಲ್ಕಂಡವರನ್ನು 2 ರಿಂದ 4ನೇ ಎದುರುದಾರರನ್ನಾಗಿ ಮುಖಪುಟದಲ್ಲಿ implead ಮಾಡಿ, 2 ರಿಂದ 4ನೇ ಎದುರುದಾರರುಗಳಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಈ ಸಂಬಂಧ 2 ರಿಂದ 4ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ ದೂರಿನಲ್ಲಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಪ್ರಸ್ತುತ ಹಂತದಲ್ಲಿ ಸದರಿ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ.

11. ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆಗಳು ಹಾಗೂ ಪ್ರತ್ಯುತ್ತರವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ 2 ರಿಂದ 4ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- 2ನೇ ಎದುರುದಾರರಾದ ಶ್ರೀ.ಹೆಚ್.ಆರ್.ಕಿಶೋರ್, ಗ್ರಾಮ ಲೆಕ್ಕಾಧಿಕಾರಿಗಳು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ಹಾಲಿ ಗುತ್ತಲು ವೃತ್ತ, ಮಂಡ್ಯ ತಾಲ್ಲೂಕು ರವರು ಶ್ರೀ.ಆರ್.ಬಸವರಾಜು ರವರು ಖಾತಾ ಬದಲಾವಣೆ ಮಾಡುವಂತೆ ಕೋರಿ ಸಲ್ಲಿಸಿರುವ ಅರ್ಜಿ ಹಾಗೂ ಅದರ ಜೊತೆಗಿನ ದಾಖಲಾತಿಗಳನ್ನು ಖಾತಾ ಬದಲಾವಣೆ ಮಾಡಬಹುದೆಂದು ಶಿಫಾರಸ್ಸು ಮಾಡುವ ಮೊದಲು ಸದರಿ ದಾಖಲಾತಿಗಳ ನೈಜತೆಯ ಬಗ್ಗೆ ಪರಿಶೀಲಿಸಿ ನಂತರ ಶಿಫಾರಸ್ಸು ಮಾಡಬೇಕಾಗಿರುತ್ತದೆ. ಆದರೆ, ಸದರಿ ಕರ್ತವ್ಯವನ್ನು ಸರಿಯಾಗಿ ಪಾಲಿಸದೇ 2ನೇ ಎದುರುದಾರರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- 3ನೇ ಎದುರುದಾರರಾದ ಶ್ರೀ.ಎಂ.ಎಸ್.ಶಿವಪ್ರಕಾಶ್, ರಾಜಸ್ವ ನಿರೀಕ್ಷಕರು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಹಾಲಿ ಉಪ ತಹಶೀಲ್ದಾರ್, ನಾಡಕಚೇರಿ, ನಡಕಲಪುರ ರವರು ಶ್ರೀ.ಆರ್.ಬಸವರಾಜು ರವರು ಖಾತಾ ಬದಲಾವಣೆ ಮಾಡುವಂತೆ ಕೋರಿ ಸಲ್ಲಿಸಿರುವ ಅರ್ಜಿ ಹಾಗು ಅದರ ಜೊತೆಗಿನ ದಾಖಲಾತಿಗಳನ್ನು ಖಾತಾ ಬದಲಾವಣೆ ಮಾಡುವ ಮೊದಲು ಸದರಿ ದಾಖಲಾತಿಗಳ ನೈಜತೆಯ ಬಗ್ಗೆ ಪರಿಶೀಲಿಸಿ, ನಂತರ ಖಾತಾ ಬದಲಾವಣೆ ಮಾಡಬೇಕಾಗುವುದು ಆಧ್ಯ ಕರ್ತವ್ಯವಾಗಿರುತ್ತದೆ. ಆದರೆ, ಸದರಿ 3ನೇ ಎದುರುದಾರರು ಸದರಿ ಕರ್ತವ್ಯವನ್ನು ಸರಿಯಾಗಿ ಪಾಲಿಸದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- 4ನೇ ಎದುರುದಾರರಾದ ಶ್ರೀಮತಿ.ಆರ್.ಸುಮಾ, ತಹಶೀಲ್ದಾರ್, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಹಾಲಿ ಆಡಳಿತಾಧಿಕಾರಿ, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರು ಶ್ರೀ.ಆರ್.ಬಸವರಾಜು ರವರು ಖಾತಾ ಬದಲಾವಣೆ ಮಾಡುವಂತೆ ಕೋರಿ ಸಲ್ಲಿಸಿರುವ ಅರ್ಜಿ ಹಾಗೂ ಅದರ ಜೊತೆಗಿನ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಖಾತಾ ಬದಲಾವಣೆ ಮಾಡಬೇಕಾಗಿರುವುದು 4ನೇ ಎದುರುದಾರರ ಆಧ್ಯ ಕರ್ತವ್ಯವಾಗಿರುತ್ತದೆ. ಆದರೆ, ಸದರಿ 4ನೇ ಎದುರುದಾರರು ಸದರಿ ಕರ್ತವ್ಯವನ್ನು ಸರಿಯಾಗಿ ಪಾಲಿಸದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

12. ದೂರುದಾರರ ದೂರು, ಎದುರುದಾರರ ಆಕ್ಷೇಪಣೆ ಮತ್ತು ದೂರುದಾರರ ಪ್ರತ್ಯುತ್ತರ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ 2 ರಿಂದ 4ನೇ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 2 ರಿಂದ 4ನೇ ಎದುರುದಾರರುಗಳು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

13. ಅದಲ್ಲದೆ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966ರ ನಿಯಮಗಳು 3(1)(ii) ಮತ್ತು (iii)ರ ಅಡಿಯಲ್ಲಿ ದುರ್ನಡತೆ/ದುರ್ವತನೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿದ್ದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ ಹಾಗೂ ಆಪಾದಿತ ಸರ್ಕಾರಿ ನೌಕರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಲಾಗಿದ್ದು, ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು-17) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, ನಿಮ್ಮ ವಿರುದ್ಧ **ಈ ಆಪಾದನೆ.**

4. The said Article of Charge was served upon DGO on 24/09/2021. Case was posted for appearance of DGO on 08/10/2021.

5. On 08/10/2021 case was called out. AOC sent to DGO was duly served. DGO called out absent. Hence, DGO is placed exparte and the case was posted on 27/10/2021for verification of records.

6. On 24/11/2021 through CLC received Application No.4846/2021filed before Hon'ble KSAT, Bengaluru by DGO challenging the order passed by the Government and also AOC in the present enquiry.

7. Further, present file was received from Chairman of Legal cell, CLC on 09/01/2023 to furnish opinion on order passed by Hon'ble KSAT, Bengaluru Bench in Application **No. 4846/2021** dated 21/12/2022, in which the Hon'ble KSAT, Bengaluru Bench quashed the proceedings initiated in pursuance of the entrustment order passed by the Government of Karnataka state in number No.ಕಂಇ/218/ ಬಿಎಂಎಂ/2018, ಬೆಂಗಳೂರು ದಿನಾಂಕ 04/05/2021 to hold enquiry against DGO/**Sri H.R. Kishor,** Village Accountant, Malavalli Taluk and also the order passed by Karnataka Lokayukta pertaining to the Article Of charge bearing number Uplok-2/DE/83/2021/ARE-17 dated 08/07/2021.

8. Facts of the case are in brief are as follows;

As per the report under section 12 (3) of Karnataka lokayukta Act, 1984 dated 24/10/2016 was forwarded to the Government in No.Compt/Uplok/MYS/956/2016/ARE-20 to initiate the departmental enquiry against the DGO/**Sri H.R. Kishor,** Village Accountant, Malavalli Taluk.

9. The Government entrusted the departmental enquiry vide order No.ಕಂಇ/218/ಬಿಎಂಎಂ/2018, ಬೆಂಗಳೂರು ದಿನಾಂಕ 04/05/2021 against the DGO.

10. On the basis of the Government order the Hon'ble Upalokayukta-2 nominated this ARE-17 as enquiry officer to conduct enquiry and submit report vide order No: Uplok-

2/DE/83/2021 dated 08/07/2021. Article of charge dated 15/09/2021 was framed and duly served on the DGO.

11. On perusal of the order passed by the Hon'ble KSAT, Bengaluru Bench, the disputed land bearing Sy.No. 57/2 measuring 1 acre 13 gunta, Sy.No. 11/A measuring 9 gunta 8 anas and Sy.No.7/1B measuring 23 guntas of Belakavadi village, Malavalli Taluk with respect to said landed property for change of khata. The applicant is none other than the Village Accountant of Malavalli Taluk. The allegations of the complainant for change of khata with respect to M.R. No.225/09-10 which was mutated in the name of Smt. Nagamma W/o Late Rachayya @ (Rachappa). The complainant filed application for change of khata in the name of her son Basavaraju. The respondent, Revenue Inspector calling for objections by issuing public notice within 30 days. Then, none of the public files any objections for change of khata in the name of Smt. Nagamma's son Basavaraju. Accordingly, Revenue Inspector of Malavalli Taluk have duly certified the name of her son under MR No.225/2009-10 dated 20/04/2010.

12. Being aggrieved by the change of khata in the name of Basavaraju, the complainant by name Smt. R. Komala D/o Late Rachayya (Rachappa) has filed complaint before this authority mainly the respondent no.2 being the Village Accountant, who has submitted documents to the Revenue Inspector for certifying the said mutation for the said landed property or not.

13. The DGO being aggrieved by the government order, he has appeared before the aforesaid tribunal. The main observation made by the aforesaid tribunal, they have observed that, the certification of mutation i.e., M.R.No. 225/2009-10 dated 20/04/2010, the complainant was having alternate remedy to prefer an appeal before the competent authority u/s 136(2) of Karnataka Land Revenue Act, 1964. On that ground only the Hon'ble Tribunal was set aside the government order and AOC.

14. Further, perused the letter dated 05/01/2023 of Sri R. Sharath Chandra, counsel who appeared before Hon'ble KSAT, Bengaluru Bench on behalf of Lokayukta.

15. Hence, on perusal of the order passed by Hon'ble KSAT, Bengaluru Bench in Application **No.4846/2021** dated 21/12/2022 it is ordered in para No.7 that, which is as follows;

> "After perusal of the entire materials, the applicant taken the contention that for change of khata in the name of the brother of the complainant was done after publishing public notice in Form No.21 and 30 days time given, they observed as per Annecure-A1, no one filed the objections to the said notice the Revenue Authority proceeded for effecting the change of khata and mutation and also issued RTC's in favour of R. Basavaraju S/o Late Rachappa has already been approved and there are no provision for cancellation of the same or for review. By issuing the endorsement dated 26/04/2016 copy of which is produced vide Annexure-A3, the revenue authorities i.e., Tahasildar, Malavalli stated that, if the complainant is aggrieved by change of khata, she can get relief by preferring appeal before the Court. So for as change of khata is concerned, if any parties aggrieved there is a provision in KLR Act, under section 136(2) of KLR Act, appeal can be preferred before the Assistant Commissioner challenging the change of

khata and the mutation effected. When such alternative remedies available under the law, the complainant has to approach the said forum by preferring the appeal. But instead of doing so, a complaint came to be filed before the Lokayukta Authorities and Lokayukta Authorities proceeded in the matter and submitted the Section 12(3) report and the allegations so far as present applicant who was working as Village Accountant at Malavalli Taluk, Mandya District when Sri Basavaraju submitted the application requesting for change of khata the applicant without verifying the documents produced along with the said application recommended for change of khata except this there are no other allegations like corruption, etc., Looking to the provision under section 136(2) of KLR Act, the complainant can challenge the change of khata and mutation entry by filing the appeal before the Assistant Commissioner as per section 136(2) and even the complainant can approach the Deputy Commissioner seeking the revision after the orders passed by the Assistant Commissioner and if aggrieved. The materials also goes to show that when section 12(3) report was submitted by the Lokayukta before the Government and the Government before passing the entrustment order addressed a letter dated 27/05/2017 to the Deputy Commissioner of Mandya District vide Annexure-A12 seeking his opinion on the section 12(3) report. Accordingly, the Mandya Deputy Commissioner had forwarded his opinion in communication dated 03/10/2017 as per Annexure-A13 opined that;

> *"the DGO's have effected change of khata pertaining to lands referred to on compliant as per provisions of KLR Act, after giving 30 days public notice during which the complainant had not objected, after effecting change of khata and mutation in RTC the Tahasildar has no power to make any changes, instead the complainant can file an appeal before the competent authority under section 136(2) of KLR Act, 1964, though the complainant was informed of this fact she is repeatedly making representations in the matter and making baseless allegations against fieldlevel officials and the complainant in Lokayukta office may be dropped."*

Even, looking to the opinion of the Deputy Commissioner, Mandya prima facie goes to show that, the applicant herein recommended for change of khata. The Respondnet Government after securing the opinion from the Deputy

Commissioner, Mandya passed one order dated 04/12/2018 copy of which is produced vide Annexure-15 wherein the request of the Upalokayukta-2 for entrusting the enquiry to the Lokayukta Authorities as against the applicant herein came to be rejected by the Government. Therefore, the Registrar, Karnataka Lokayukta, Bangalore addressed a letter to Smt. Umadevi, Under Secretary to Government, Revenue Department (Services-1), M.S. Building, Bangalore which is dated 20/01/2021 copy of the which is produced vide Annexure-A-16 intimating the under secretary that section 12(3) report was sent to the Government and what is the action taken on the section 12(3) report the Under Secretary has to appear before the Upalokayukta-2 on 18/02/2021 personally and to submit the compliance report. Thereafter, respondent Government again passed the one more order dated 04/05/2021 entrusting the enquiry against the applicant herein to the Lokayukta authorities invoking Rule 14-A of KCS(CC&A) Rules, 1957. When the Government itself rejected the request of the Lokayukta authorities by its earlier order dated 04/12/2018 why said order was changed and again the decision was taken by the respondent Government to entrust the enquiry against the applicant herein to Lokayukta authorities by passing subsequent order dated 04/05/2021 is not at all made clear by the Government. Therefore, looking to the entire materials we are of the considered view that the applicant has made out a case.

Accordingly, application is hereby allowed, impugned order bearing No. KamE 218 BMM 2018 dated 04/05/2021 issued by the 1st respondent and produced vide Annexure-A-17 and Articles of Charge bearing No.Uplok-2/DE-83/2021/ARE-17 dated 15/09/2021 issued by 2nd respondent and produced vide Annexure-A-18 are hereby set aside."

16. Further, Chairman, CLC, Karnataka Lokayukta has opined that, **this is not a fit case to proceed**. The relevant portion of the letter dated 20/02/2023 is as follows;

*"I write to inform you that, on 21/12/2021, the Hon'ble KSAT, Bengaluru in Application No. 4846/2021 filed by Sri Kishor. H.R., in connection*

*with above referred enquiry. Further, it is decided not to challenge the order of the Hon'ble KSAT, Bengaluru."*

17. Based on the observations made by Hon'ble KSAT in application No.4846/2021, and based on the opinion of Chairman, CLC, Karnataka Lokayukta, Bengaluru in letter dated 20/02/2023 as well as, as per orders of Hon'ble Upalokayukta dated 10/02/2023 it is ordered to close the present file.

18. Accordingly, further proceedings cannot be continued and present enquiry requires to be closed and proceed to pass the following order;

**<u>O R D E R</u>**

Disciplinary Enquiry against DGO Sri H.R. Kishore, Village Accountant, Malavalli Taluk, Mandya District cannot be continued and this enquiry is treated as 'closed', in view of order that, not fit to challenge the Hon'ble KSAT order.

Submitted to His Lordship Hon'ble Upalokayukta-2 for further action in the matter.

31/3/23

**(RAJKUMAR.S.AMMINABHAVI)**
Additional Registrar Enquiries-17
Karnataka Lokayukta, Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/83/2021/ARE-17

Multi Storied Building,
Dr. B.R. Ambedkar Veedhi,
Bengaluru-560001
Date: 31st March, 2023.

# RECOMMENDATION

Sub: Departmental Inquiry against Shri H.R.Kishore, Village Accountant, Malavalli Taluk, Mandya District-reg.

Ref: 1) Government Order No.ಕಂಇ 218 ಬಿಎಂಎಂ 2018, Bengaluru, dated: 04/05/2021.

2) Nomination Order No.UPLOK-2/DE/83/2021, Bengaluru, dated: 08/07/2021 of Upalokayukta, State of Karnataka, Bengaluru.

3) Inquiry Report dated: 31/03/2023 of Additional Registrar of Enquiries-17, Karnataka Lokayukta, Bengaluru.

*****

The Government by its order dated: 04/05/2021 initiated the disciplinary proceedings against Shri H.R.Kishore, Village Accountant, Malavalli Taluk, Mandya District (hereinafter referred to as Delinquent Government Officials, for short as DGO) and entrusted the Departmental Inquiry to this Institution.

2. This Institution by Nomination Order No. UPLOK-2/DE/83/2021, Bengaluru, dated: 08/07/2021 nominated Additional Registrar of Enquiries-17, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri H.R.Kishore, Village Accountant, Malavalli Taluk, Mandya District was tried for the following charges:

**ಅನುಬಂಧ-1**

**ದೋಷಾರೋಪಣೆ ಪಟ್ಟಿ**

ದೂರುದಾರರಾದ ಶ್ರೀಮತಿ.ಆರ್.ಕೋಮಲ ಡಾ/ಆಫ್ ಲೇಟ್ ರಾಚಪ್ಪ, ನಂ.10, 3ನೇ ಕ್ರಾಸ್, ಅಯ್ಯಪ್ಪಸ್ವಾಮಿ ದೇವಸ್ಥಾನದ ರಸ್ತೆ, ಸುಬ್ಬಣ್ಣ ಗಾರ್ಡನ್, ವಿಜಯನಗರ, ಬೆಂಗಳೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಆ,ಸ,ನೌ.ರಾದ ಶ್ರೀ.ಹೆಚ್.ಆರ್.ಕಿಶೋರ್, ಗ್ರಾಮ ಲೆಕ್ಕಾಧಿಕಾರಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ನೀವು ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಹೋಬಳಿಯ ಬೆಳಕವಾಡಿ ಗ್ರಾಮದ ಸ.ನಂ.9 ರಲ್ಲಿ 0.23 ಗುಂಟೆ, ಸ.ನಂ.11/ಎ ರಲ್ಲಿ 0.09.08 ಗುಂಟೆ ಜಮೀನನ್ನು ದೂರುದಾರರಾದ ಶ್ರೀಮತಿ.ಆರ್.ಕೋಮಲ ಇವರ ಸಹೋದರ ಶ್ರೀ.ಆರ್.ಬಸವರಾಜ್ ರವರು ಒಬ್ಬನೇ ಮಗನೆಂದು ನಕಲಿ ದಾಖಲೆಗಳನ್ನು ಸಲ್ಲಿಸಿ, ಖಾತೆ ವರ್ಗಾವಣೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಕುರಿತಂತೆ ಆ.ಸ.ನೌ.ರಾದ ನೀವು ಸರಿಯಾಗಿ ಪರಿಶೀಲಿಸದೆ ಅರ್ಜಿಯೊಂದಿಗೆ ಸಲ್ಲಿಕೆಯಾದ ದಾಖಲೆಗಳ ನೈಜತೆಯನ್ನು ಪರಿಶೀಲಿಸಿಕೊಳ್ಳದೆ ಖಾತಾ ಬದಲಾವಣೆ ಮಾಡಬಹುದೆಂದು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವ ಮೂಲಕ ಖಾತೆ ಬದಲಾವಣೆ ಮಾಡಲು ಕಾರಣರಾಗಿರುತ್ತೀರಿ.

ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)(i)(ii)&(iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

4. Notice of Articles of charge, Statement of Imputation of misconduct with list of witnesses and documents was served upon the DGO. But, DGO was not present. Hence, he was placed exparte and case was posted for verification of records.

5. On 24/11/2021, received Application No.4846/2021 from CLC, wherein DGO challenged the order passed by the Government and also Articles of Charge. The KSAT, Bengaluru Bench has allowed the Application filed by DGO and impugned order bearing No.ಕಂಇ 218 ಬಿಎಂಎಂ 2018, ಬೆಂಗಳೂರು, dated: 04/05/2021 and Articles of Charge bearing No.UPLOK-2/DE/83/2021/ARE-17, dated: 15/09/2021 are set aside.

6. Opinion given by ARE-17 on 07/02/2023 was approved by Hon'ble Lokayukta on 16/02/2023, that it is not a fit case to challenge the orders of the KSAT, Bengaluru Bench by way of Writ Petition before Hon'ble High Court of Karnataka.

7. The file was referred to the Chairman, Legal Cell-2, Karnataka Lokayukta, Bengaluru. In turn the Chairman, Legal Cell-2, Karnataka Lokayukta, Bengaluru has sent letter dated: 20/02/2023, wherein it is stated that it is decided not to challenge

the order of the KSAT, Bengaluru Bench in Application No.4846/2021.

8. On perusal of the judgement laid down by the KSAT in Application No.4846/2021 and on consideration of the totality of circumstances, since, the impugned order bearing No.ಕಂಇ 218 ಬಿಎಂಎಂ 2018, ಬೆಂಗಳೂರು, dated: 04/05/2021 and Articles of Charge bearing No.UPLOK-2/DE/83/2021/ARE-17, dated: 15/09/2021 against DGO are set aside vide order dated 21/12/2022 by KSAT in Application No.4846/2021 and the same is not challenged by the Chairman, Legal Cell, Karnataka Lokayukta, Bengaluru, narrating the above details to close this enquiry against DGO, Shri H.R.Kishore. Hence, the instant proceedings against DGO, Shri H.R.Kishore do not survive for consideration.

> "The proceedings initiated against DGO, Shri H.R.Kishore, Village Accountant, Malavalli Taluk, Mandya District stands closed on account of impugned order bearing No.ಕಂಇ 218 ಬಿಎಂಎಂ 2018, ಬೆಂಗಳೂರು, dated: 04/05/2021 and Articles of Charge bearing No.UPLOK-2/DE/83/2021/ARE-17, dated: 15/09/2021 against

the DGO are set aside by KSAT, Bengaluru Bench in Application No.4846/2021, dated: 21/12/2022.

9. Therefore, it is hereby recommended to the Government to accept the report of Inquiry Officer and to close the proceedings against DGO, Shri H.R.Kishore, Village Accountant, Malavalli Taluk, Mandya District in view of the fact that impugned order bearing No.ಕಂಇ 218 ಬಿಎಂಎಂ 2018, ಬೆಂಗಳೂರು, dated: 04/05/2021 and Articles of Charge bearing No.UPLOK-2/DE/83/2021/ARE-17, dated: 15/09/2021 against DGO is being set aside as per the order of the KSAT, Bengaluru Bench in Application No.4846/2021, dated: 21/12/2022 and also decided, not fit to challenge the order passed by KSAT, Bengaluru Bench.

10. Action taken in the matter shall be intimated to this Authority.

Connected records are enclosed herewith.

31/3/23

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.